# ಯಾಗದ ಕುದುರೆ

■ ಪ್ರಕಾಶ ಗ. ಖಾಡೆ

ಮೂಡಗಲ್ಲು ಸಂಸ್ಥಾನದ ಮಹಾರಾಜರ ಕುದುರಿ ಏಕಾಏಕಿ ತಪ್ಪಿಸಿಕೊಂಡು ಕಾಡು ಸೇರಿದ ಸುದ್ದಿ ಬೆಳಗು ಮುಂಜಾನಿ ಹೊತ್ತಿಗೆ ಸುತ್ತ ಏಳೂರಿಗೆ ತಲುಪಿ ಮಹಾರಾಜರನ್ನು ಸೇರಿ, ಜನತೆಯನ್ನೂ ಚಿಂತೆಗೀಡು ಮಾಡಿತು. ಹಾಗೆ ನೋಡಿದರೆ ಅರಮನೆಯ ಹತ್ತಾರು ಕುದುರೆಗಳಲ್ಲಿ ಈಗಷ್ಟೇ ಎರಡು ದಿನಗಳ ಹಿಂದೆ ಬಂದು ಸೇರಿದ್ದ ಈ ಕುದುರೆ ತಪ್ಪಿಸಿಕೊಳ್ಳಲು ಕಾರಣವೂ ಇತ್ತು. ಕುದುರೆ ತಪ್ಪಿಸಿಕೊಂಡ ಸಂಗತಿ ಸ್ವತಃ ಮಹಾರಾಜರನ್ನೂ ಸೇರಿ ಮಹಾರಾಣಿಯವರಿಗೂ ತೀವ್ರವಾದ ಖಿನ್ನತೆಯನ್ನುಂಟು ಮಾಡಿತು. ಮಹಾರಾಜರು ತಮ್ಮ ಸಂಸ್ಥಾನದ ತೆರೆದ ಜೀಪನ್ನು ಸಿದ್ಧ ಮಾಡಿಡಲು ಅರಮನೆಯ ಆಳುಗಳಿಗೆ ಹೇಳಿದರು. ಕುದುರೆ ಹುಡುಕಲು ಮಹಾರಾಜರೊಂದಿಗೆ ಮಹಾರಾಣಿಯವರೂ ಬರುವುದಾಗಿಯೂ ತಮ್ಮನ್ನೂ ಕರೆದುಕೊಂಡು ಹೋಗಬೇಕೆಂದು ಕೇಳಿಕೊಂಡಾಗ, ಮಹಾರಾಣಿಯವರ ಮನಸ್ಸನ್ನು ನೋಯಿಸುವ ಮನಸ್ಸು ಮಹಾರಾಜರಿಗೆ ಇರಲಿಲ್ಲ. 'ಸರಿ ಸಿದ್ಧರಾಗಿರಿ' ಎಂದರು. ಜೀಪಿನಲ್ಲಿ ಬಂದೂಕು, ದಾರಿಯ ಆಯಾಸ ಕಳೆಯಲು ನೀರು, ಅಷ್ಟಿಷ್ಟು ಆಹಾರ ಎಲ್ಲವನ್ನು ಕೂಡಿಟ್ಟುಕೊಂಡು, ಬೆಳಗಿನ ಉಪಾಹಾರ ಮುಗಿಸಿ ಕುದುರೆ ಹುಡುಕಲು ರಾಜ ದಂಪತಿ ಹೊರನಡೆದರು.

***

ಸಂಸ್ಥಾನಕ್ಕೆ ಈಗಷ್ಟೇ ಸೇರಿದ್ದ ಈ ಕುದುರೆಗೆ ಒಂದು ಇತಿಹಾಸವಿತ್ತು. ಕುದುರೆ ಸುತ್ತಮುತ್ತ ಏಳೂರಿಗೆ ಐಶ್ವರ್ಯದ ಸಂಕೇತವಾಗಿತ್ತು. ಅದು ಒಂದು ಸಾಧಾರಣ ಕುದುರೆಯಾಗಿರದೆ, ಅದಕ್ಕಿರುವ ಹೆಚ್ಚುಗಾರಿಕೆಯಿಂದ ಕುದುರೆಯನ್ನು ಕಣ್ಣಾರೆ ನೋಡುವುದೇ ಒಂದು ಪೂಜನೀಯ ಮತ್ತು ಖುಷಿಯ ವಿಷಯವಾಗಿತ್ತು. ಮೂಲ ಜೈಪುರ ಸಂಸ್ಥಾನಕ್ಕೆ ಸೇರಿದ್ದ ಈ ಕುದುರೆ ಅದ್ಹೇಗೋ ಕರುನಾಡಿನ ಕೆಚ್ಚೆದೆಯ ಗಂಡುಮೆಟ್ಟಿನ ನೆಲ ಮೂಡಗಲ್ಲು ಸಂಸ್ಥಾನಕ್ಕೆ ಬಂದು ಸೇರಿತ್ತು. ಈ ಸೇರುವಿಕೆಯ ಹಿಂದೆ ಒಂದು ಇತಿಹಾಸವಿದೆ. ಸಂಸ್ಥಾನದ ಸರಹದ್ದಿನಲ್ಲಿ ಬರುವ ಗುಣಸಿರಿ ಗ್ರಾಮದ ಹೊರಗೆ ಮಹಾರಾಜರ ಪೂರ್ವಿಕರು ಬೇಸಿಗೆಯಲ್ಲಿ ಉಳಿದುಕೊಳ್ಳಲು ಒಂದು ಬೇಸಿಗೆ ಅರಮನೆ ಕಟ್ಟಿದ್ದರು. ಸುತ್ತ ಹಸಿರು ಚೆಲ್ಲಿದ ಪರಿಸರದಲ್ಲಿ ತುಂಬಾ ಎತ್ತರಕ್ಕಿರುವ ಸಮತಟ್ಟಾದ ಪ್ರದೇಶದಲ್ಲಿ ಕಟ್ಟಿದ ಈ ಬೇಸಿಗೆ ಅರಮನೆಯನ್ನು ಬಹುದೂರದಿಂದಲೂ ಗುರುತಿಸಬಹುದಿತ್ತು. ಬೇಸಿಗೆ ಅರಮನೆಗೆ ರಾಜರು ಬರುವುದು ತುಂಬಾ ಕಡಿಮೆ. ಈ ಭಾಗಕ್ಕೆ ಬೇಟೆಯಾಡಲು ಬಂದಾಗ ಮತ್ತು ರಾಜ್ಯಭಾರದ ಆಯಾಸ ಕಳೆಯಲು ಮಾತ್ರ ಬರುತ್ತಿದ್ದರು. ಉಳಿದಂತೆ ಇಲ್ಲಿಯ ಅರಮನೆಯ ಕೆಲಸಗಾರರು ಮತ್ತವರ ಕುಟುಂಬವರ್ಗದವರು ಅರಮನೆಯನ್ನು ನೋಡಿಕೊಳ್ಳುತ್ತಿದ್ದರು.

ದೇಶಕ್ಕೆ ಸ್ವಾತಂತ್ರ್ಯ ಬಂದು ಸಂಸ್ಥಾನಗಳು ಒಕ್ಕೂಟ ಸರಕಾರದಲ್ಲಿ ವಿಲೀನವಾದಾಗ ಮೂಡಗಲ್ಲು ಸಂಸ್ಥಾನವೂ ಇದಕ್ಕೆ ಹೊರತಾಗಲಿಲ್ಲ. ಆವಾಗ ಆಡಳಿತವೆಲ್ಲ ಸರಕಾರದ ಕೈ ಸೇರಿದಾಗ ಸಂಸ್ಥಾನದ ಅರಸರು ಅರಮನೆಯ ಅಸ್ತಿತ್ವ ಉಳಿಸಿಕೊಂಡು ಕೆಲವರು ಇಲ್ಲಿಯೇ ಉಳಿದರೇ, ಉಳಿದಂತೆ ರಾಜ ವೈಭೋಗಕ್ಕಾಗಿ ಕೆಲವರು ಕೊಲ್ಲಾಪುರ, ನಾಸಿಕ, ಪುಣೆ, ಮುಂಬೈ ಸೇರಿದ್ದರು. ಮೂಡಗಲ್ಲು ಸಂಸ್ಥಾನದಲ್ಲಿ ಉಳಿದುಕೊಂಡಿದ್ದ ಮಹಾರಾಜರು ಕೃಷಿಕರು, ಪ್ರಕೃತಿಪ್ರಿಯರು ಮತ್ತು ಜನ ಆರಾಧಕರೂ ಆಗಿದ್ದರು. ಸಂಸ್ಥಾನದ ಕಾರುಬಾರ ಹೋದರೂ ಜನತೆಯೊಂದಿಗಿನ ತಮ್ಮ ಹಿರಿತನವನ್ನು ಅವರೆಂದೂ ಕಳೆದುಕೊಂಡಿರಲಿಲ್ಲ. ಸ್ವತಃ ಕೃಷಿಕರಾಗಿದ್ದ ಮಹಾರಾಜರು ತೋಟ ಮಾಡಿಕೊಂಡು ಕಬ್ಬು, ತೆಂಗು, ಬಾಳೆ ಮೊದಲಾದ ಹಣ್ಣುಹಂಪಲ ಬೆಳೆದು ಈ ಭಾಗದಲ್ಲಿ ಹೆಸರಾಗಿದ್ದರು. ಮಹಾರಾಜರಿಗೆ ಹಳೆಯ ಕಾಲದ ಜೀಪು ಕಾರುಗಳನ್ನು ಸಂಗ್ರಹಿಸುವುದು, ಅತ್ಯುತ್ತಮ ಕುದುರೆಗಳು ಎಲ್ಲಿಯೇ ಇರಲಿ ಅವನ್ನು ಖರೀದಿಸುವುದು ಮತ್ತು ಕಲೆ, ಕ್ರೀಡೆಗಳಿಗೆ ಪ್ರೋತ್ಸಾಹ ಕೊಡುವುದು ಅವರ ಬದುಕಿನ ಹವ್ಯಾಸವಾಗಿತ್ತು. ಮಹಾರಾಜರಿಗೆ ಪೂರಕವಾಗಿ ಮಹಾರಾಣಿಯವರೂ ಇದೇ ರೀತಿಯ ಮನೋಭಾವ ಹೊಂದಿದ್ದರು. ಹೀಗಾಗಿ ಸಂಸ್ಥಾನದ ಕುಟುಂಬ ವರ್ಗದವರನ್ನು ಸುತ್ತ ಹಳ್ಳಿಯವರು ತುಂಬಾ ಪ್ರೀತಿಯಿಂದ ಕಾಣುತ್ತಿದ್ದರು.

***

ಪ್ರಜಾಪ್ರತಿನಿಧಿ ಸರಕಾರಗಳು ಬಂದು ಸಂಸ್ಥಾನದ ಆಡಳಿತ ಹೊರಟು ಹೋದಾಗ ಗುಣಸಿರಿಯ ಬೇಸಿಗೆ ಅರಮನೆಗೆ ಮಹಾರಾಜರ ಪರಿವಾರ ಬರುವುದು ಕಡಿಮೆಯಾಯಿತು. ಅರಮನೆಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಕೆಲಸದವರಿಗೆ ಸರಿಯಾದ ಸಂಬಳ ಸಿಗದೇ ಅವರೂ ಕಡಿಮೆಯಾಗುತ್ತಾ ಬಂದರು. ಹೀಗಾಗಿ ತುಂಬಾ ಬೆಲೆಬಾಳುವ ಅರಮನೆ, ಸುತ್ತಲಿನ ಹತ್ತಾರು ಎಕರೆ ಜಮೀನು ಉಸ್ತುವಾರಿಯಿಲ್ಲದೇ ಬಿಕೋ ಎನ್ನತೊಡಗಿತು, ಇಂಥ ಸುಸಜ್ಜಿತವಾದ ಕಟ್ಟಡ ಮತ್ತು ಆವರಣದಲ್ಲಿ ಒಂದು ಯೋಗ ಶಾಲೆಯನ್ನು ತೆರೆಯುವ ಯೋಚನೆ ಕೆಲ ಕ್ರೀಡಾಸಕ್ತರಲ್ಲಿ ಮೂಡಿತು, ಅವರು ತಡ ಮಾಡದೇ

